f) Patrolling on National Highways.

g) Sigh boards have been erected wherever necessary on National Highways.

h) Cantilever blink-is have been installed in important junction to avoid accidents.

i) Humps have been made to control the vehicle speed identifying the accident spots.

j) Cases are being filed against the overspeed, negligent and drunken drivers.

ರಾಜ್ಯದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳು.

266 (409) ಶ್ರೀ. ಸಿ.ಆರ್.ಸಗೀರ್ ಅಹ್ಮದ್ (ಚಿಕ್ಕಮಗಳೂರು):

ಮಾನ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು;

(ಆ) ಹುದ್ದೆಗಳನ್ನು ಭರ್ತಿ ಮಾಡಲಾಗಿರುವ ಇಲಾಖೆಗಳಾವುವು;

(ಇ) ಸರ್ಕಾರದ ಆದೇಶಗಳಂತೆ ಇಲಾಖೆಗಳಲ್ಲಿನ ನೇಮಕಾತಿಯಲ್ಲಿ ಅಲ್ಪ ಸಂಖ್ಯಾತರಿಗೆ ಶೇಕಡಾ 4 ರಷ್ಟು ಮಿಾಸಲಾತಿಯನ್ನು ಅನುಸರಿಸಲಾಗುತ್ತಿದೆಯೇ;

(ಈ) ಹಾಗಿದ್ದಲ್ಲಿ, ಇಲಾಖಾವಾರು ಮಾಹಿತಿ ನೀಡುವುದು?

ಶ್ರೀ.ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಯವರು.)

(ಅ) ನೇರ ನೇಮಕಾತಿ ನಿರ್ಭಂಧವನ್ನು ದಿನಾಂಕ 8-11-93 ರಿಂದ ತೆಗೆದು ಹಾಕಲಾಗಿದೆ.

ಅವಶ್ಯವಿರುವ ಕಡೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇರ ನೇಮಕಾತಿ ಮಾಡಲು ಆರ್ಥಿಕ ಮಿತವ್ಯಯದ ಆದೇಶವನ್ನು ಸಡಿಲಿಸಿ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗುತ್ತಿದೆ.

(ಆ) ಪಟ್ಟಿ ಲಗತ್ತಿಸಿದೆ.

(ಇ) ಸಂವಿಧಾನದ ಅನುಚ್ಛೇದ 16(4) ರನ್ವಯ ರಾಜ್ಯ ಸಿವಿಲ್ ಸೇವೆಗಳಿಗೆ ನೇಮಕಾತಿಯಲ್ಲಿ ಹಿಂದುಳಿದ ವರ್ಗದವರಿಗೆ ಮಿಾಸಲಾತಿಯನ್ನು ಒದಗಿಸಬಹುದು. ಅಲ್ಪಸಂಖ್ಯಾತರಿಗೆ ಮಿಾಸಲಾತಿಯನ್ನು ಒದಗಿಸಲು ಸಂವಿಧಾನದಲ್ಲಿ ಅವಕಾಶವಿಲ್ಲ.

(ಈ) ಉದ್ಭವಿಸುವುದಿಲ್ಲ.

ಅನುಬಂಧ

ಈ ಕೆಳಕಂಡ ಆಡಳಿತ ಇಲಾಖೆಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ಕ್ಷೇತ್ರ ಇಲಾಖೆಗಳಲ್ಲಿ 1995-96ರಲ್ಲಿ ಖಾಲಿ ಹುದ್ದೆಗಳನ್ನು ತುಂಬಲಾಗಿದೆ.

ಕ್ರಮ ಸಂಖ್ಯೆ	ಇಲಾಖೆಯ ಹೆಸರು
1.	ಒಳಾಡಳಿತ ಮತ್ತು ಸಾರಿಗೆ ಇಲಾಖೆ
2.	ಆರ್ಥಿಕ ಇಲಾಖೆ
3.	ಶಿಕ್ಷಣ ಇಲಾಖೆ
4.	ಲೋಕೋಪಯೋಗಿ ಇಲಾಖೆ
5.	ಕಾನೂನು ಇಲಾಖೆ
6.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
7.	ಸಮಾಜ ಕಲ್ಯಾಣ ಇಲಾಖೆ
8.	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ
9.	ಕನ್ನಡ ಮತ್ತು ಸಂಸ್ಕೃತಿ ಇಲಾಖೆ
10.	ಕಾರ್ಮಿಕ ಇಲಾಖೆ
11.	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
12.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
13.	ನಗರಾಭಿವೃದ್ಧಿ ಇಲಾಖೆ
14.	ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
15.	ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ
16.	ಕೃಷಿ ಮತ್ತು ತೋಟಗಾರಿಕೆ ಇಲಾಖೆ
17.	ಕಂದಾಯ ಇಲಾಖೆ
18.	ಸಹಕಾರ ಇಲಾಖೆ
19.	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ
20.	ಯೋಜನೆ ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ಯಂತ್ರಕಲೆ ಇಲಾಖೆ
21.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
22.	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

ಭದ್ರಾ ಮೇಲ್ದಂಡೆ ಯೋಜನೆ ಕುರಿತು

267 (410) :ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):

ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಭದ್ರಾ ಮೇಲ್ದಂಡೆ ಯೋಜನೆಯು ಕೆಲಸ ಪ್ರಾರಂಭ ಮಾಡಲು ಸರ್ಕಾರವು ಆಲೋಚಿಸಿದೆಯೇ;

(ಆ) ಈ ಯೋಜನೆಯ ಕೆಲಸ ಪ್ರಾರಂಭವಾದರೆ ಎಷ್ಟು ಎಕರೆ ಅರಣ್ಯ ಪ್ರದೇಶವು ಮುಳುಗಡೆಯಾಗುತ್ತದೆ;

(ಇ) ಈ ಯೋಜನೆಯಿಂದ ಎಷ್ಟು ಟಿ.ಎಂ.ಸಿ. ನೀರನ್ನು ಸಂಗ್ರಹಿಸಲಾಗುತ್ತಿದೆ;

(ಈ) ಈ ಯೋಜನೆಯಿಂದ ಯಾವ ಯಾವ ಜಿಲ್ಲೆಗೆ ನೀರಾವರಿ ಸವಲತ್ತನ್ನು ಒದಗಿಸಲಾಗುತ್ತದೆ?

ಶ್ರೀ ಕೆ.ಎನ್.ನಾಗೇಗೌಡ(ಬೃಹತ್ ನೀರಾವರಿ ಮಂತ್ರಿಗಳು.)